# ಮಗು ಜೊತೆ ಯಾವ ಭಾಷೆ ಮಾತನಾಡಲಿ?

ಅಪ್ಪ ಅಮ್ಮ ವಿಭಿನ್ನ ಭಾಷಿಕರಾಗಿದ್ದಲ್ಲಿ, ಎಳೆ ಮಕ್ಕಳ ಜೊತೆ ಯಾವ ಭಾಷೆಯಲ್ಲಿ ಮಾತನಾಡಲು ಆರಂಭಿಸಬೇಕು ಎಂಬ ಪ್ರಶ್ನೆ ಈಗ ಸಾಮಾನ್ಯವಾಗುತ್ತಿದೆ.

■ ಚಿತ್ರ–ಬರಹ:
**ಡಾ.ಎಂ.ಡಿ. ಸೂರ್ಯಕಾಂತ**



‘ನಾನು ಕನ್ನಡ, ಮರಾಠಿ ಚೆನ್ನಾಗಿ ಮಾತನಾಡುತ್ತೇನೆ. ನನ್ನ ಪತ್ನಿಗೆ ಮರಾಠಿ ಮಾತ್ರ ಗೊತ್ತು. ಮೂರು ತಿಂಗಳು ಮಗಳಿದ್ದಾಳೆ. ಇವಳ ಜೊತೆ ನಾವು ಯಾವ ಭಾಷೆ ಮಾತನಾಡಲು ಆರಂಭಿಸಬೇಕು?’

‘ನಮ್ಮಿಬ್ಬರದೂ ಇಂಗ್ಲಿಷ್ ಭಾಷೆ ಚೆನ್ನಾಗಿದೆ, ಆದರೆ ಪತಿಯ ಉಚ್ಚಾರ ಉತ್ತಮ. ನಾನು ಕನ್ನಡ ಚೆನ್ನಾಗಿ ಬಲ್ಲೆ. ಮಗು ಜೊತೆ ಯಾವ ಭಾಷೆಯಲ್ಲಿ ಮಾತನಾಡಬೇಕು ತಿಳಿಯುತ್ತಿಲ್ಲ..’

‘ನಾವು ಪತಿ ಪತ್ನಿಯರಿಬ್ಬರೂ ಕನ್ನಡದವರೇ. ಆದರೆ ನೌಕರಿಗೆಂದು 5–6 ವರ್ಷ ವಿದೇಶದಲ್ಲಿರುತ್ತೇವೆ. ಅಲ್ಲಿ ಕೇವಲ ಇಂಗ್ಲಿಷ್ ಮತ್ತು ಫ್ರೆಂಚ್ ಶಾಲೆಗಳಿವೆ. ಮನೆಯಲ್ಲಿ ಮಗು ಜೊತೆ ಯಾವ ಭಾಷೆಯಲ್ಲಿ ಮಾತನಾಡಬೇಕು? ಯಾವ ಸ್ಕೂಲಿಗೆ ಸೇರಿಸಬೇಕು?.’

‘ಮಕ್ಕಳಿಗೆ ಹೆಚ್ಚು ಭಾಷೆ ಕಲಿಸುವುದು ಒಳ್ಳೆಯದಲ್ಲ ಎನ್ನುತ್ತಾರಲ್ಲಾ ಡಾಕ್ಟ್ರೇ, ಇದು ನಿಜವೇ?.

* * *

